| | | | |
|---|---|---|---|
| ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಚಿಂತಾಮಣಿ | | | |
| ಸಿಸಿ ನಂ. 1701/2021 | | | |
| ಸಾಕ್ಷಿದಾರರ ಹೆಸರು | ಆದರ್ಶ್ | | |
| ತಂದೆ /ಗಂಡನ ಹೆಸರು | ನರಸಿಂಹಪ್ಪ | ಪಿಡಬ್ಲ್ಯೂ | 1 |
| ವಯಸ್ಸು | 25 ವರ್ಷ | ಸಿಡಬ್ಲ್ಯೂ | 1 |
| ಉದ್ಯೋಗ | ಬಾರ್ ಬೆಂಡಿಂಗ್ ಕೆಲಸ | ಪ್ರಮಾಣ ವಚನ | |
| ವಾಸ ಸ್ಥಳ | ಸೂಲದೇವನಹಳ್ಳಿ | ಭೋದಿಸಿದ ದಿನಾಂಕ | 07-12-2023 |

ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದಃ

ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನಾನು ನೋಡಿರುವುದಿಲ್ಲ . ದಿಃ03-9-22 ರಂದು ನನ್ನ ತಂದೆ ಚಾಸ-2 ನರಸಿಂಹಪ್ಪ ಗಾರೆ ಕೆಲಸಕ್ಕೆ ಹೋಗಿ ಕೆಲಸ ಮುಗಿಸಿಕೊಂಡು ಸಂಜೆ 4-45 ಗಂಟೆಗೆ ಮನೆಗೆ ಬರುತ್ತಿರುವ ಸಮಯದಲ್ಲಿ ಗಜಾನನ ವೃತ್ತದ ಹತ್ತಿರ ರಸ್ತೆ ದಾಟುತ್ತಿದ್ದಾಗ ಕೆ ಎ 40 ಎಪ್ 1017 ಕೆ ಎಸ್ ಆರ್ ಟಿ ಸಿ ಬಸ್ ಅನ್ನು ಅದರ ಚಾಲಕನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನನ್ನ ತಂದೆಗೆ ಡಿಕ್ಕಿ ಪಡಿಸಿದ್ದು ಬಸ್ ಅನ್ನು ನನ್ನ ತಂದೆಯ ಕಾಲು ಮತ್ತು ಕೈ ಮೇಲೆ ಹತ್ತಿಸಿಕೊಂಡು ಹೋಗಿರುತ್ತಾರೆ. ಚಾಸ-3 ರವರು ಅಪಘಾತಪಡಿಸಿದ ನಮ್ಮ ತಂದೆಯನ್ನು ನೋಡಿ ಆಸ್ಪತ್ರೆಗೆ ದಾಖಲು ಮಾಡಿ ನನಗೆ ಪೋನ್ ಮೂಲಕ ನನ್ನ ತಂದೆಗೆ ಅಪಘಾತವಾದ ಬಗ್ಗೆ ಮತ್ತು ಚಿಕಿತ್ಸೆಗೆ ದಾಖಲು ಮಾಡಿದ ಬಗ್ಗೆ ತಿಳಿಸಿರುತ್ತಾರೆ. ಆಸ್ಪತ್ರೆಗೆ ಬಂದು ನೋಡಿದಾಗ ನನ್ನ ತಂದೆ ಅಂತ ಗೊತ್ತಾಗಿದ್ದು ಈ ವಿಚಾರದ ಸಲುವಾಗಿ ಪೊ. ಠಾಣೆಯಲ್ಲಿ ವಿಷಯ ತಿಳಿಸಿ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಿರುತ್ತೇನೆ.

ನಂತರ 05-9-22 ರಂದು ಅಪಘಾತದ ಸ್ಥಳದಲ್ಲಿ ನನ್ನ ಸಮಕ್ಷಮದಲ್ಲಿ ಅಪಘಾತ ಸ್ಥಳದ ಪಂಚನಾಮೆಯನ್ನು ಸಮಯ 10 ರಿಂದ 11 ಗಂಟೆಯವರೆಗೆ ಜರುಗಿಸಿರುತ್ತಾರೆ. ಠಾಣೆಗೆ ದೂರು ದಾಖಲು ಮಾಡಿರುತ್ತೇನೆ.

ದೂರನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದಿನ್ನು ನಿಪಿ-1 ಎಂದು ಸಾಕ್ಷಿಯು ಸಹಿಯನ್ನು ನಿಪಿ-1 (ಎ) ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಸಾಕ್ಷಿಯು ಸಹಿಯನ್ನು ನಿಪಿ 2 (ಎ) ಎಂದು ಗುರುತಿಸಲಾಯಿತು.

ಪಾಟೀಸವಾಲುಃ ಆರೋಪಿ ಪರ ವಕೀಲರು ಸಮಯ ಕೋರಿದ್ದು ಸಕಾರಣ ಇಲ್ಲದ ಕಾರಣ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.

| | | | |
|---|---|---|---|
| ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಚಿಂತಾಮಣಿ | | | |
| ಸಿಸಿ ನಂ. 1701/2021 | | | |
| ಸಾಕ್ಷಿದಾರರ ಹೆಸರು | ನರಸಿಂಹಪ್ಪ | | |
| ತಂದೆ ಹೆಸರು | ವೆಂಕಟಪ್ಪ | ಪಿಡಬ್ಲ್ಯೂ | 2 |
| ವಯಸ್ಸು | 50 ವರ್ಷ | ಸಿಡಬ್ಲ್ಯೂ | 2 |
| ಉದ್ಯೋಗ | ಗಾರೆ ಕೆಲಸ | ಪ್ರಮಾಣ ವಚನ | |
| ವಾಸ ಸ್ಥಳ | ಸೂಲದೇವನಹಳ್ಳಿ | ಭೋದಿಸಿದ ದಿನಾಂಕ | 07-12-2023 |

ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದಃ

ಈಗ್ಗೆ ಒಂದು ವರ್ಷದ ಹಿಂದೆ ನಾನು ಗಾರೆ ಕೆಲಸವನ್ನು ಮುಗಿಸಿಕೊಂಡು ಮನೆಗೆ ಬರುವಾಗ ಗಜಾನನ ವೃತ್ತದ ಸರ್ಕಲ್ ನಲ್ಲಿ ರಸ್ತೆಯ ಪ್ಕದಲ್ಲಿ ಬರುತ್ತಿದ್ದಾಗ ಸರ್ಕಾರಿ ಬಸ್ ಚಾಲಕನು ಅತೀ ಜೋರಾಗಿ ತನ್ನ ವಾಹನವನ್ನು ಚಾಲನೆ ಮಾಡಿಕೊಂಡು ಬಂದು ನನಗೆ ಡಿಕ್ಕಿ ಪಡಿಸಿದ ಪರಿಣಾಮ ನನ್ನ ಕಾಲಿಗೆ ಮತ್ತು ಕೈ ಗೆ ಪೆಟ್ಟು ಬಿದ್ದು ಗಾಯವಾಗಿರುತ್ತದೆ. ನಂತರ ನನ್ನನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲು ಮಾಡಿದ್ದು ನಂತರ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನಾನು ನೋಡಿರುವುದಿಲ್ಲ . ಈ ವಿಚಾರವಾಗಿ ನನ್ನ ಮಗ ದೂರು ನೀಡಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಸ ಅ ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)

ಪಾಟೀಸವಾಲುಃ ಮಾನ್ಯ ಎ ಪಿ ಪಿ ರವರಿಂದಃ

ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯೇ ಆ ದಿನ ಬಸ್ ಅನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನಿಮಗೆ ಡಿಕ್ಕಿ ಪಡಿಸಿರುತ್ತಾರೆ ಎಂದರೆ ನಾನು ನೋಡಿರುವುದಿಲ್ಲ. ಈ ವಿಚಾರವಾಗಿ ಹೇಳಿಕೆ ನೀಡಿರುತ್ತೀರಿ ಎಂದರೆ ಗೊತ್ತಿರುವುದಿಲ್ಲ.

ಪಾಟೀಸವಾಲುಃ ಆರೋಪಿ ಪರ ವಕೀಲರು ಸಮಯ ಕೋರಿದ್ದು ಸಕಾರಣ ಇಲ್ಲದ ಕಾರಣ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.

| | | | |
|---|---|---|---|
| ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಚಿಂತಾಮಣಿ | | | |
| ಸಿಸಿ ನಂ. 1701/2021 | | | |
| ಸಾಕ್ಷಿದಾರರ ಹೆಸರು | ಚಲಪತಿ | | |
| ತಂದೆ /ಗಂಡನ ಹೆಸರು | ವೆಂಕಟೇಶ್ | ಪಿಡಬ್ಲ್ಯೂ | 3 |
| ವಯಸ್ಸು | 33 ವರ್ಷ | ಸಿಡಬ್ಲ್ಯೂ | 3 |
| ಉದ್ಯೋಗ | ಸ್ಟ್ಯಾಂಪೆಂಡರ್ | ಪ್ರಮಾಣ ವಚನ | |
| ವಾಸ ಸ್ಥಳ | ಚಿಂತಾಮಣಿ | ಭೋದಿಸಿದ ದಿನಾಂಕ | 07-12-2023 |

ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದಃ

ದಿಃ03-9-22 ರಂದು ಸಂಜೆ 4-45 ಗಂಟೆಗೆ ನಾನು ಮತ್ತು ನನ್ನ ಸ್ನೇಹಿತರು ಗಜಾನನ ವೃತ್ತದ ಹತ್ತಿರ ನಡೆದುಕೊಂಡು ಬರುತ್ತಿರುವಾಗ ಕೆ ಎ 40 ಎಪ್ 1017 ಕೆ ಎಸ್ ಆರ್ ಟಿ ಸಿ ಬಸ್ ಅನ್ನು ಅದರ ಚಾಲಕನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಚಿಕ್ಕಬಳಾಳಪುರ ಕಡೆ ಹೋಗವ ರಸ್ತೆ ಕಡೆ ತಿರುವಿಕೊಂಡು ಬಂದು ಚಾಸ-2 ರವರಿ ಡಿಕ್ಕಿ ಪಡಿಸಿದ್ದು ಅವರು ಅಲ್ಲೆ ಸ್ಥಳದಲ್ಲಿ ಬಿದ್ದಿದ್ದು ಅವರನ್ನು ವಿಚಾರಿಸಲಾಗಿ ತನ್ನದು ಸೂಲದೇವನಹಳ್ಳಿ ಅಂತ ತಿಳಿಸಿರುತ್ತಾರೆ. ಅವಪಘಾತದಿಂದ ಬಲಕಾಲು ಮತ್ತು ಬಲ ಕೈ ಪೆಟ್ಟು ಬಿದ್ದು ಮೂಳೆ ಕಾಣಿಸುತ್ತಿದ್ದು ಅವರನ್ನು ಚಿಕಿತ್ಸೆಗೆಗಾಗಿ 108 ವಾಹನಕ್ಕೆ ಕರೆ ಮಾಡಿ ಚಿಂತಾಮಣಿ ಆಸ್ಪತ್ರೆಗೆ ಕರೆದುಕೊಂಡು ಹೋರಿ ಚಿಕಿತ್ಸೆಗೆ ದಾಖಲು ಮಾಡಿ ಈ ವಿಚಾರವನ್ನು ಚಾಸ-1 ರವರಿಗೆ ಪೋನ್ ಮೂಲಕ ತಿಳಿಸಿರುತ್ತೇನೆ. ಈ ವಿಚಾರವಾಗಿ ಹೇಳಿಕೆ ನೀಡಿರುತ್ತೇನೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನಾನು ನೋಡಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಸ ಅ ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)

ಪಾಟೀಸವಾಲುಃ ಮಾನ್ಯ ಎ ಪಿ ಪಿ ರವರಿಂದಃ

ಅಪಘಾತದಿಂದ ಚಾಸ-2 ರವರಿಗೆ ಎರಡಕಾಲಿಗೆ ಮತ್ತು ಎಡಕೈ ಗೆ ಪೆಟ್ಟಾಗಿತ್ತು ಎಂದರೆ ಬಲಕೈ ಗೆ ಪೆಟ್ಟಾಗಿತ್ತು.

ಪಾಟೀಸವಾಲುಃ ಆರೋಪಿ ಪರ ವಕೀಲರು ಸಮಯ ಕೋರಿದ್ದು ಸಕಾರಣ ಇಲ್ಲದ ಕಾರಣ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.